# ಮೂರ್ಖತನದಿಂದ ನಂಬಿಕೆಯೆಡೆಗೆ : ಅಪೋಸ್ತಲನಾದ ಪೇತ್ರ
## (ಮಾರ್ಕ18, ಯೋಹಾನ 18 ಮತ್ತು 21)

**ಪೀಠಿಕೆ** : ಕ್ರಿಸ್ತನಿಗೆ ಒಳ್ಳೇ ಸಾಕ್ಷಿಯಾಗಿರಲಿಕ್ಕೆ ಸಾಧ್ಯವಿಲ್ಲ ಎಂಬ ಒಬ್ಬ ಮನುಷ್ಯನನ್ನು ಕುರಿತು ಎಂದಾದರೂ ಆಲೋಚನೆ ಮಾಡಿದ್ದೀರಾ? ಕ್ರೈಸ್ತನೆಂದರೆ ಹೇಗಿರಬೇಕು ಎಂಬುದನ್ನು ಕುರಿತು ಒಣಭಾಷಣ ಮಾಡುವವರ ಕುರಿತು ನಾನು ಮಾತನಾಡುತ್ತಿಲ್ಲ. ಆದರೆ ಕ್ರೈಸ್ತತ್ವದ ಬಗ್ಗೆ ಗಂಭೀರವಾದ ಆಲೋಚನೆಗಳಿಂದ ಕೂಡಿರುವ, ಆದರೆ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗದೆ ಒದ್ದಾಡುತ್ತಿರುವ ಒಬ್ಬ ಕ್ರಿಸ್ತನನ್ನು ಕುರಿತು ಮಾತಾಡುತ್ತಿದ್ದೇನೆ. ಮತ್ತೊಬ್ಬರೊಂದಿಗೆ ಹೊಂದಿಕೊಂಡು ಹೋಗುವ ಸಾಮರ್ಥ್ಯವನ್ನು ಪ್ರಪಂಚ ಭಾವನಾತ್ಮಕ ಬೌದ್ಧಿಕತೆ (Emotional Intelligence) ಎಂದು ಕರೆದರೆ, ಅದನ್ನೇ ಸತ್ಯವೇದ ವಿವೇಕ (Wisdom) ಎಂದು ಕರೆದಿದೆ. ನಾವು ಈ ವಾರ ಅಪೋಸ್ತಲನಾದ ಪೇತ್ರನನ್ನು ಕುರಿತು ಅಧ್ಯಾಯನ ಮಾಡುತ್ತಿದ್ದೇವೆ. ಈ ಭಾವನಾತ್ಮಕ ಬೌದ್ಧಿಕತೆಯ ವಿಭಾಗದಲ್ಲಿ ಪೇತ್ರನ ಪಾತ್ರ ಬಹುಮುಖ್ಯ ಸ್ಥಾನಪಡೆದಿದೆ. ಈಗ ನೇರವಾಗಿ ಸತ್ಯವೇದದ ಆಳವಾದ ಅಧ್ಯಾಯನಕ್ಕೆ ನಮ್ಮನ್ನು ತೊಡಗಿಸಿಕೊಂಡು, ಪೇತ್ರನ ಮುಖಾಂತರ, ನಮ್ಮ ಭಾವನಾತ್ಮಕ ಬೌದ್ಧಿಕತೆಯ ಬೆಳವಣಿಗೆಗೆ ಏನಾದರೂ ಕಲಿಯಲು ಸಾಧ್ಯವೇ ಎಂಬುದನ್ನು ಕುರಿತು ಚಿಂತಿಸೋಣ:

## I. ಸಾವಿನತನಕ ಭರವಸೆ: ವಾಗ್ದಾನ

(ಅ) ಸೀಮೋನ ಪೇತ್ರ ಮತ್ತು ಯೋಹಾನ ಯೇಸುಸ್ವಾಮಿಗೆ ಹೇಗೆ ಶಿಷ್ಯರಾದರು ಎಂಬುದನ್ನು ಕುರಿತು ಕಳೆದ ವಾರ ಕಲಿತೆವು. ಯೇಸುಸ್ವಾಮಿ ಭೂಮಿಯ ಮೇಲಿದ್ದ ಕೊನೆಯ ದಿನಗಳಲ್ಲಿ ಇವರುಗಳು ಅವರೊಂದಿಗೆ ಹೇಗೆ ನಡೆದುಕೊಂಡರೆಂಬುದನ್ನು ಈ ವಾರ ನೋಡೋಣ. ಮಾರ್ಕ 14:26–29 ವಾಕ್ಯಗಳನ್ನು ಓದಿ ನೋಡಿ. ತಾನು ಏನು ಮಾಡುತ್ತೇನೆ ಎಂಬುದನ್ನು ಕುರಿತು ಯೇಸುಸ್ವಾಮಿ ಹೇಳಿದ್ದು ಏಕೆ ಮತ್ತು ಅದಕ್ಕೆ ಉತ್ತರವಾಗಿ ಪೇತ್ರ, ತಾನು ಆ ಸಮಯದಲ್ಲಿ ಹೀಗೆ ನಡೆದುಕೊಳ್ಳುತ್ತೇನೆ. ಎಂದು ಹೇಳಿದ್ದು ಏಕೆ? ಈ ಸಂದರ್ಭದಲ್ಲಿ ಯೇಸುಸ್ವಾಮಿ ಹಳೇ ಒಡಂಬಡಿಕೆಯ ಒಂದು ಪ್ರವಾದನೆಯನ್ನು ಉದಾಹರಿಸುತ್ತಿದ್ದಾರೆ. (ಜೆಕರ್ಯ 13:7). ಅದನ್ನು ತಮಗೆ ಅನ್ವಯಿಸಿಕೊಳ್ಳುತ್ತಿದ್ದಾರೆ. ಮತ್ತು ತಮ್ಮ ಶಿಷ್ಯರಿಗೂ ಅನ್ವಯಿಸುತ್ತಿದ್ದಾರೆ. ಈ ಪ್ರವಾದನೆ (ಯೇಸುಸ್ವಾಮಿಯ ಹೇಳಿಕೆ) ತನಗೆ ಅನ್ವಯವಾಗುತ್ತದೆಯೇ ಎಂಬುದರ ಬಗ್ಗೆ ವಾಗ್ವಾದಕ್ಕೆ ಇಳಿದಿದ್ದಾನೆ. ಇತರೇ ಶಿಷ್ಯರುಗಳಿಗಿಂತ ತಾನು ಹೆಚ್ಚು ಉತ್ತಮನೂ ಮತ್ತು ಹೆಚ್ಚು ನಂಬಿಕೆಯುಳ್ಳವನು ಎಂಬುದು ಆತನ ಅಂಬೋಣ.

(ಆ) ಮಾರ್ಕ 14:30ನ್ನು ಓದಿರಿ. ಯೇಸುಸ್ವಾಮಿ ತಾವು ನುಡಿದ ಸತ್ಯವನ್ನು ಬೆಂಬಲಿಸುವುದಕ್ಕಾಗಿ ಏನು ಮಾಡುತ್ತಾರೆ? [ಯೇಸುಸ್ವಾಮಿ ಇಲ್ಲಿ ತಮ್ಮದೇ ಆದ ಒಂದು ಪ್ರವಾದನೆಯನ್ನು ನುಡಿದಿದ್ದಾರೆ. ಅದು ನೆರವೇರಲು ಬಹಳ ಸಂಕ್ಷಿಪ್ತ ಸಮಯವನ್ನು ಗೊತ್ತು ಮಾಡಿದ್ದಾರೆ. ಅದರ ಎಲ್ಲಾ ವಿವರಣೆಯನ್ನು ಕೊಟ್ಟಿದ್ದಾರೆ.

ಆ ದಿನದಲ್ಲಿ ಕೋಳಿ ಎರಡು ಸಾರಿ ಕೂಗುವದಕ್ಕಿಂತ ಮುಂಚೆ, ಪೇತ್ರ, ಯೇಸುಸ್ವಾಮಿಯನ್ನು ಅರಿಯೆನೆಂದು ಮೂರು ಸಾರಿ ಹೇಳುವನು].

(ಇ) ಮಾರ್ಕ 14:31ನ್ನು ಓದಿಕೊಳ್ಳಿ. ನಾವಿಲ್ಲಿ ಕಾಣುವ ಪೇತ್ರನ ಅಪ್ರಮಾಣಿಕ ಗುಣ ಯಾವದು? (ಅಹಂ, ದೃಢನಿರ್ಧಾರ)

1) ನಾವಿಲ್ಲಿ ಕಾಣುವ ಭಾವನೆಯೇನು?

2) ಜ್ಞಾನೋಕ್ತಿ 12:15–16ನ್ನು ಓದಿಕೊಳ್ಳಿ. ಸತ್ಯವೇಧಾರಿತ ಭಾವನಾತ್ಮಕ ಬೌಧಿಕತೆಯ ವೇದವಚನವಿದು. ಇಲ್ಲಿನ ನಿಯಮಗಳೇಣು? ಮತ್ತು ಪೇತ್ರ ಅವುಗಳನ್ನು ಉಲ್ಲಂಘಿಸಿದ್ದು ಹೇಗೆ? [ಯೇಸುಸ್ವಾಮಿ ಭವಿಷ್ಯವನ್ನು ಕುರಿತು ಪೇತ್ರನಿಗೆ ಎರಡು ಸಾರಿ ಉಪದೇಶ ಮಾಡಿದ್ದರು. ಆದರೆ ಪೇತ್ರ ಅವುಗಳನ್ನು ನಿರಾಕರಿಸಿದ್ದ. ಒಮ್ಮೆ ಕೋಪವನ್ನು ವ್ಯಕ್ತಪಡಿಸಿದ್ದ.

i. ಬಹುಶಃ ಪೇತ್ರ ಒಂದು ಸಮಯ, “ಕರ್ತನೇ ಇದು ನಡೆಯುವದು ಹೇಗೆ ಮತ್ತು ಅದರಿಂದ ನಾನು ತಪ್ಪಿಸಿಕೊಳ್ಳವರು ಹೇಗೆ? ಎಂದು ಹೇಳಿದಿದ್ದರೆ, ಭವಿಷ್ಯ ಹೇಗಿರುತ್ತಿತ್ತು?

1) ಜ್ಞಾನೋಕ್ತಿ 13:10ನ್ನು ಓದಿಕೊಳ್ಳಿರಿ. ಅಹಂ ಮತ್ತು ಭಾವನಾತ್ಮಕ ಬೌಧಿಕತೆ ಬೇಡುವ ಉಪದೇಶ – ಈ ಎರಡೂ ಘರ್ಷಿಸಿಕೊಳ್ಳುವದು ಹೇಗೆ? ಪೇತ್ರನ ಜೀವನದಲ್ಲಿ ಇದು ನಿಜವಾದದ್ದು ಹೇಗೆ? [ಹೇಗೆಂದರೆ: ಪೇತ್ರನಲ್ಲಿದ್ದ ಅಹಂ ಮತ್ತು ಹಟಮಾರಿತನ, ತಾನು ಯೇಸುಸ್ವಾಮಿಯನ್ನು ನಿರಾಕರಿಸಿ ಬಿಡಬಹುದೇನೋ ಎಂಬ ಆಲೋಚನೆಗೆ ಅವಕಾಶವೇ ಮಾಡಿಕೊಡಲಿಲ್ಲ. ಯೇಸುಸ್ವಾಮಿಯವರ ಉಪದೇಶದಿಂದ ಈತ ಏನನ್ನೂ ಕಲಿಯಲಿಲ್ಲ.]

(ಈ) ಮತ್ತೊಂದು ಸುವಾರ್ತೆ ದೃಷ್ಟಿಕೋನದಿಂದ ಈ ಘಟನೆಯನ್ನು ವಿಮರ್ಶಿಸೋಣ. ಲೀಕ 22:35–36ನ್ನು ಓದಿಕೊಳ್ಳಿ. ಇಲ್ಲಿ ಬರುವ ಮತ್ತೊಂದು ಘಟನೆ, ಯೇಸುಸ್ವಾಮಿ ಮುಂದೆ ಪೇತ್ರನಿಂದ ಜರುಗಲಿರುವ ಅಪ್ರಮಾಣಿಕತೆಯ ಚರ್ಚೆಯ ಮುಂದುವರಿದ ಭಾಗವಾಗಿದೆ. ಮೇಲಂಗಿಗಿಂತ ಕತ್ತಿ ಬಹುಮುಖ್ಯ ಎನಿಸಿದ್ದು ಏಕೆ?

## II. ಸಾವಿನತನಕ ಭರವಸೆ: ಹೋರಾಟ.

(ಅ) ಯೋಹಾನ 18:1–3ನ್ನು ಓದಿಕೊಳ್ಳಿ. ಯೇಸುಸ್ವಾಮಿ, ಪೇತ್ರ ಮುಂದೆ ಅಪ್ರಮಾಣಿಕನಾಗಿ ನಡೆದುಕೊಳ್ಳುತ್ತಾನೆ ಎಂದು ನುಡಿದ ಮಾತುಗಳು ಕೆಲವೇ ಕೆಲವು ಘಂಟೆಗಳ ಹಿಂದಿನ ಮಾತಾಗಿತ್ತು. ಪೇತ್ರ, ಯೂದನನ್ನು ಮತ್ತು ಆತನ ಸಂಗಡ ಬಂದ ಸಿಪಾಯಿಗಳನ್ನು ಕಂಡಾಕ್ಷಣ, ಆತನ ಮನಸ್ಸಿನಲ್ಲಿ ಎದ್ದಿರಬಹುದಾದ ಭಾವನೆಗಳೇನು ಎಂದು ನನಗೆ ಸ್ವಲ್ಪ ಹೇಳುತ್ತೀರಾ? [ಇಷ್ಟು ಹೊತ್ತಿಗೆ, ಯೇಸುಸ್ವಾಮಿ ಮೊದಲೇ ನುಡಿದಿದ್ದ ಒಂದು

ಪ್ರವಾದನೆ : ಶಿಷ್ಯರಲ್ಲಿ ಒಬ್ಬ ನನ್ನನ್ನು ಹಿಡುಕೊಡುತ್ತಾನೆ ಎಂಬುದು ಪೇತ್ರನ ಕಣ್ಮುಂದೆಯೇ ಜರುಗುತ್ತಿದೆ. "ಇದೊಂದು ಪರೀಕ್ಷೆ" ಎಂದು ಪೇತ್ರ ಅಂದುಕೊಂಡಿರಲಿಕ್ಕೂ ಸಾಕು.]

(ಆ) ಯೋಹಾನ 18:10ನ್ನು ಓದಿರಿ. ಪೇತ್ರನ ಪ್ರಾಮಾಣಿಕತೆಯ ವಿಷಯದಲ್ಲಿ ಯಾರು ಸರಿ? ಯೇಸುಸ್ವಾಮಿಯೇ ಅಥವಾ ಪೇತ್ರನೇ? [ಪೇತ್ರ –"ಸ್ವಾಮಿ, ನಿನ್ನ ಸಂಗಡ ಸೆರೆಮನೆಗೆ ಹೋಗುವದಕ್ಕೂ ಸಾಯುವದಕ್ಕೂ ಸಿದ್ಧನಾಗಿದ್ದೇನೆ" ಎಂಬ ಮಾತನ್ನು ಸಿದ್ಧಾಂತಮಾಡಿ ತೋರಿಸಿದ ಎನಿಸುತ್ತದೆ. ಸಿಪಾಯಿಗಳೂ ಬಂದಾಗ ಆತ ಅಲ್ಲೇ ಇದ್ದ. ಯೇಸುಸ್ವಾಮಿಯನ್ನು ನಿರಾಕರಿಸಲಿಲ್ಲ. ತನ್ನ ಕತ್ತಿಯನ್ನು ಹಿಡಿದ. ತನ್ನ ಒಡೆಯನಿಗಾಗಿ ಹೋರಾಡಲು ಸಿದ್ಧನಾದ. ಮಹಾಯಾಜಕನ ಆಳಿನ ಬಲಗಿವಿಯನ್ನು ಕತ್ತರಿಸಿದ!]

## III. ಸಾವಿನತನಕ ಭರವಸೆ: ಗೊಂದಲ

(ಅ) ಯೋಹಾನ 18:11ನ್ನು ಓದಿಕೊಳ್ಳಿರಿ. ಪೇತ್ರನ ಮನಸ್ಸಿನಲ್ಲಿ ಈಗ ನಡೆಯುತ್ತಿರುವುದೇನು? [ಅವನಿಗೆ ಗೊಂದಲವಾಗಿರಬಹುದು. ತನ್ನ ಪ್ರಾಮಾಣಿಕತೆಯ ಬಗ್ಗೆ ಯೇಸುಸ್ವಾಮಿಗಿರುವ ಅಭಿಪ್ರಾಯ ತಪ್ಪು ಎಂಬುದನ್ನು ಸಾಬೀತು ಪಡಿಸಿದ್ದೇನೆ. ಯೇಸುಸ್ವಾಮಿ ಈ ನನ್ನ ವರ್ತನೆಯನ್ನು ಶ್ಲಾಘಿಸುತ್ತಿಲ್ಲ. ಅದಕ್ಕೆ ಬದಲು ಗದರಿಸುತ್ತಿದ್ದಾರೆ! ಯೇಸುಸ್ವಾಮಿ ಕತ್ತಿ ಕೊಂಡುಕೊಳ್ಳಲು ಸಲಹೆ ಮಾಡಿದ್ದನ್ನು ಜ್ಞಾಪಿಸಿಕೊಳ್ಳುತ್ತಿದ್ದಾನೆ. ಆತ ಕೊಂಡುಕೊಂಡಿರುವದು ಮಾತ್ರವಲ್ಲ, ಅದನ್ನು ಪ್ರಯೋಗವೂ ಮಾಡಿಬಿಟ್ಟಿದ್ದಾನೆ.]

i. "ತಂದೆ ನನಗೆ ಕೊಟ್ಟಿರುವ ಪಾತ್ರೆಯಲ್ಲಿ ನಾನು ಕುಡಿಯಬಾರದೋ" ಎಂದು ಹೇಳುವಾಗ ಯೇಸುಸ್ವಾಮಿ ಏನನ್ನು ಕುರಿತು ಮಾತನಾಡುತ್ತಿದ್ದಾರೆ. ಯೇಸುಸ್ವಾಮಿ ಇದಕ್ಕೆ ಮೊದಲೂ "ಬಟ್ಟಲಿನ (ಪಾತ್ರೆಯ) ವಿಷಯ ಕುರಿತು ಮಾತನಾಡಿದ್ದರು. (ಮಾರ್ಕ 14:2024). ಅದೇ ಸಂದರ್ಭದಲ್ಲಿ ಒಬ್ಬ ತನ್ನನ್ನು ಹಿಡುದು ಕೊಡುತ್ತಾನೆ ಎಂದರು ಮತ್ತು ಪೇತ್ರನ ಅಪ್ರಮಾಣಿಕತರದ ಬಗ್ಗೆಯೂ ಮಾತನಾಡಿದ್ದರು. ಪೇತ್ರನು ತಲೆಯಲ್ಲಿ ಇವೆಲ್ಲವೂ ಗಿರಿಗಟ್ಟಲೆಯಾಡುತ್ತಿದ್ದವು !)

(ಆ) ಯೋಹಾನ 8:31–33ನ್ನು ಓದಿರಿ. ಪೇತ್ರ ಯೇಸುಸ್ವಾಮಿಯಿಂದ ಗದರಿಕೆಗೆ ಒಳಗಾಗುವಂತೆ ಮಾಡಿದ್ದು ಏನು? [ಭಾವನಾತ್ಮಕ ಬೌದ್ಧಿಕತೆಯ ಕೊರತೆಯನ್ನು ಪೇತ್ರ ಪ್ರದರ್ಶಿಸಿದ್ದ. ಇದೇ ರೀತಿಯಾಗಿ ಮುಂದೆ ನಡೆದುಕೊಂಡದ್ದನ್ನು ಓದಿಕೊಂಡೆವು. ಆತನಲ್ಲಿದ್ದ ಅಹಂ ಮತ್ತು ಹಟಮಾರಿತನ ಮತ್ತೆ ಮತ್ತೆ ಯೇಸುಸ್ವಾಮಿ ಭವಿಷ್ಯವನ್ನು ಕುರಿತು ಹೇಳುವ ಮಾತುಗಳನ್ನು ನಿರಾಕರಿಸುವಂತೆ ಮಾಡಿತ್ತು.]

i. ಯೇಸುಸ್ವಾಮಿಗೆ ಪ್ರಾಮಾಣಿಕನಾರಿಗಲು ಮುಂದೇನು ಮಾಡಬೇಕು ಎಂಬ ಆಲೋಚನೆಯ ವಿಷಯದಲ್ಲಿ, ಈ ಘಟನೆಯನ್ನು ಆತ ನೆನೆಪಿಸಿಕೊಳ್ಳಬೇಕಿತ್ತು. ಆದರೆ ಆತನ ಗೊಂದಲಗಳು. ಈ-ಘಟನೆಯನ್ನೇ ಆ ಮರೆಯುವಂತೆ ಮಾಡಿದ್ದವು. [ಇದೊಂದು ಬಹುಮುಖ್ಯವಾದ ಪಾಠ ನಮಗೆ ಯೇಸುಸ್ವಾಮಿ ನಮಗಾಗಿ ಮಡಿಯಲು ಬಂದಿದ್ದಾರೆ ಎಂಬ ಆಲೋಚನೆಯನ್ನೇ ಪೇತ್ರ ನಿರಾಕರಿಸುತ್ತಿದ್ದ. ಆತನಿಗೆ ಯೇಸುಸ್ವಾಮಿ ರಾಜನಾಗುವದು ಬೇಕಾಗಿತ್ತು. ತನ್ನ ಸ್ವಂತ ಆಲೋಚನೆಗಳನ್ನು ಬಿಟ್ಟಕೊಡುವದಕ್ಕೆ ಆತ ನಿರಾಕರಿಸಿದ್ದ. ಪ್ರಾಮಾಣಿಕನಾಗಿರುವದು ಎಂದರೆ ಆತನಿಗಾಗಿ ಹೋರಾಡುವದು ಎಂದುಕೊಂಡು ಬಿಟ್ಟಿದ್ದ.]

## IV. ಸಾವಿನತನಕ ಭರವಸೆ: ವಿಫಲತೆ

(ಅ) ಯೋಹಾನನ ಕಥೆಯನ್ನು ಮುಂದುವರಿಸೋಣ. ಯೋಹಾನ 18:12-16ನ್ನು ಓದಿರಿ. ಪೇತ್ರನು ಮಹಾಯಾಜಕನ ಮನೆಯ ಅಂಗಳದೊಳಕ್ಕೆ ಹೋಗಲು ಹೇಗೆ ಸಾಧ್ಯವಾಯಿತು. [ಆ ಮತ್ತೊಬ್ಬ ಶಿಷ್ಯನು (ಯೋಹಾನನು) ಬಾಗಲು ಕಾಯುವವಳ ಸಂಗಡ ಮಾತಾಡಿ ಪೇತ್ರನನ್ನು ಒಳಕ್ಕೆ ಕರೆದುಕೊಂಡು ಹೋದನು].

(ಆ) ಯೋಹಾನ 18:17ನ್ನು ಓದಿಕೊಳ್ಳಿ. ಯೇಸುಸ್ವಾಮಿಯನ್ನು ನಿರಾಕರಿಸುವ ಶೋಧನೆ ಈ ರೂಪದಲ್ಲಿ ಬರುತ್ತದೆಯೆಂದು ಪೇತ್ರ ನಿರೀಕ್ಷಿಸಿದ್ದನೇ? [ಅವನ ಹತ್ತಿರ ಕತ್ತಿಯಿದ್ದಾಗ ಸಿಪಾಯಿಗಳ ಮುಖಾಮತರ ಶೋಧನೆ ಬಂದದ್ದು ಸರಿ. ಆದರೆ ಕೇವಲ ಒಬ್ಬಳು "ಬಾಗಿಲು ಕಾಯುವವಳ" ಮುಖಾಂತರ ಅಂಥಹ ಶೋಧನೆ ಬರುವುದುಂಟೆ?]

i. ಇದು ಅನ್ಯಾಯ ಎಂದು ಪೇತ್ರ ಹೇಳಬಹುದೇ? ಯೇಸುಸ್ವಾಮಿಯನ್ನು ನಿರಾಕರಿಸುತ್ತಾನೆಯೇ ಅಥವಾ ಇಲ್ಲವೇ ಎಂಬುದು ಆತ ಮಹಾಯಾಜಕನ ಸಿಪಾಯಿಯ ಕಿವಿ ಕತ್ತರಿಸಿದಾಗಲೇ ಆ ಆಟ ಮುಗಿಯಿತ್ತಲ್ಲವೇ?

ii. ಜ್ಞಾನೋಕ್ತಿ 19:20-21ನ್ನು ಓದಿಕೊಳ್ಳಿರಿ. ಈ ಭಾವನಾತ್ಮಕ ಬೌದ್ಧಿಕತೆಯ ನಿಯಮಗಳು ಪೇತ್ರನಿಗೆ ಸಹಾಯಕಾರಿಯಾದದ್ದು ಹೇಗೆ? [ಪೇತ್ರನ ಭವಿಷ್ಯದ ಕನಸುಗಳ ವಿಷಯದಲ್ಲಿ ಯೇಸುಸ್ವಾಮಿ ಮೊದಲೇ ಆತನನ್ನು ಗದರಿಸಿದಾಗ, (ಮಾರ್ಕ 8:31-33) ಪೇತ್ರ, ಯೇಸುಸ್ವಾಮಿಯವರ ಉಪದೇಶಕ್ಕೆ ಕಿವಿಕೊಟ್ಟಿದ್ದರೆ, ಆತ ಯೇಸುಸ್ವಾಮಿಯವರ ಉಪದೇಶಗಳನ್ನು ಅರ್ಥಮಾಡಿಕೊಳ್ಳುತ್ತಿದ್ದನು. ಮತ್ತು ಆ ಯೋಜನೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದನು. ಮುಂದೆ ತನ್ನನ್ನು ನಿರಾಕರಿಸುವ ಬಗ್ಗೆ ಯೇಸುಸ್ವಾಮಿ ಕೊಟ್ಟ ಸೂಚನೆಯನ್ನು (ಆತ ಅಂಗೀಕರಿಸಿಕೊಂಡು, ಅದರಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ಬೇಡಿಕೊಂಡಿದ್ದರೆ, ಅಪ್ರಮಾಣಿಕತದ ಹೆಸರು ಬಾರದಂತೆ ನೋಡಿಕೊಳ್ಳಬಹುದಾಗಿತ್ತು. ಈ ಸಂದರ್ಭಕ್ಕೆ ಜ್ಞಾನೋಕ್ತಿ ಬಹಳ ಚೆನ್ನಾಗಿ ಹೊಂದುತ್ತದೆ. ಮನುಷ್ಯನ ಮನಸ್ಸಿನಲ್ಲಿ ಅನೇಕ ಸಂಕಲ್ಪಗಳಿರಬಹುದು, ಆದರೆ ಕೊನೆಗೆ ದೇವರ ಸಂಕಲ್ಪವೇ ನೆರವೇರುವದು. ಹೀಗಾಗಿ ನಾವು ದೇವರ ಮಾತಿಗೆ ಕಿವಿಗೊಟ್ಟಾರೆ, ನಮಗೆ ಬರಲಿರುವ ಅನೇಕ ಕಷ್ಟನಷ್ಟಗಳಿಂದ ಮತ್ತು ಗೊಂದಲಗಳಿಂದ ತಪ್ಪಿಸಿಕೊಳ್ಳಬಹುದು.]

## V. ಸಾವಿನತನಕ ಭರವಸೆ: ವಿಮೋಚನೆ.

(ಅ) ಯೋಹಾನ 21:14-15ನ್ನು ಓದಿಕೊಳ್ಳಿ. ಪೇತ್ರನ ಮನೋಭಿಪ್ರಾಯಗಳಲ್ಲಿ ಯಾವುದೇ ವ್ಯತ್ಯಾಸಗಳನ್ನು ಇಲ್ಲಿ ಕಾಣುತ್ತೀರಾ? ಯೇಸುಸ್ವಾಮಿ ಬೇರೆ ಶಿಷ್ಯರಿಗಿಂತ ಪೇತ್ರನನ್ನು ಹೆಚ್ಚಾಗಿ ಪ್ರೀತಿಸುವದು ಇಲ್ಲಿ ವ್ಯಕ್ತವಾಗಿದೆ. ಅವನಿಗೆ ಪ್ರಮುಖ ಸ್ಥಾನ ಕೊಡಲಾಗಿದೆ. ಇದನ್ನು ಮಾರ್ಕ 14:29 ರೊಂದಿಗೆ ಹೋಲಿಸಿನೋಡಿರಿ. ಯೇಸುಸ್ವಾಮಿಯನ್ನು ಪ್ರೀತಿಸುವ ವಿಷಯ ಬಂದಾಗ, ಪೇತ್ರ, ತಾನು ಇತರೇ ಶಿಷ್ಯರಿಗಿಂತ ಮೇಲು ಎಂಬ ಭಾವನೆಯನ್ನು ಈಗ ವ್ಯಕ್ತಪಡಿಸುತ್ತಿಲ್ಲ.]

ಆ) ಯೋಹಾನ 21:16ನ್ನು ಓದಿಕೊಳ್ಳಿ. ಯೇಸುಸ್ವಾಮಿ ಒಂದೇ ಪ್ರಶ್ನೆಯನ್ನು ಎರಡು ಬಾರಿ ಕೇಳುವುದರ ಔಚಿತ್ಯವೇನು? [ಪೇತ್ರನು ಮೊದಲ ಉತ್ತರದಲ್ಲಿರುವ ಸತ್ಯದಲ್ಲಿ ಯೇಸುಸ್ವಾಮಿಗೆ ನಂಬಿಕೆ ಹುಟ್ಟಿಲ್ಲ ಎಂಬ ಸೂಚನೆ ಕಂಡುಬರುತ್ತದೆ.]

ನೀವೇ ಪೇತ್ರನಾಗಿದ್ದರೆ ಅಂಥಹ ಸಂದರ್ಭದಲ್ಲಿ ನಿಮ್ಮ ಆಲೋಚನೆ ಏನಾಗಿರುತ್ತಿತ್ತು? [ನನ್ನ ಹಿಂದಿನ ಅಪ್ರಾಮಾಣಿಕ ನಡತೆಯಿಂದ ನಾನು ಅಪರಾಧಿ ಮನೋಭಾವದಿಂದ ನರಳುತ್ತಿದ್ದೆನು. ಯೇಸುಸ್ವಾಮಿ ನನ್ನ ವಿಫಲತೆಯನ್ನು ಕುರಿತು ಚಿಂತಿಸುತ್ತಿದ್ದಾರೆ ಎಂಬ ಆಲೋಚನೆಯೇ ನನ್ನ ಹೃದಯನ್ನು ಛಿದ್ರಛಿದ್ರಗೊಳಿಸುತ್ತಿತ್ತು?

(ಇ) ಯೋಹಾನ 21:18-19ನ್ನು ಓದಿಕೊಳ್ಳಿರಿ. ಆತ ಮೊದಲ ಪೇತ್ರನೇ ಆಗಿದ್ದರೆ ಈ ಮಾತುಗಳಿಗೆ ಎಂಥಹ ಪ್ರತಿಕ್ರಿಯೆ ನೀಡುತ್ತಿದ್ದನು. [ಉತ್ತರದ ಊಹೆಗೆ ಮಾರ್ಕ 8:33ನ್ನು ಮತ್ತೊಮ್ಮೆ ಓದಿಕೊಳ್ಳಿ. ಯೇಸುಸ್ವಾಮಿ, ಮುಂದೆ ಪೇತ್ರ ಜನರಿಂದ ಕೊಲ್ಲಲ್ಪಡುವುದನ್ನು ಕುರಿತು ಹೇಳಿದ್ದರು. "ನಿನ್ನ ಕೈಗಳನ್ನು ಚಾಚುವಿ" ಎಂಬ ಮಾತುಗಳು ಮುಂದೆ ಆತ ಶಿಲುಬೆಗಂಬವೇರುವುದನ್ನು ಸೂಚಿಸುತ್ತಿದ್ದವು. "ಪೇತ್ರ ಇಂಥಹ ಸಾವನ್ನೇ ಕಂಡನು ಎಂಬುದನ್ನು ಆದಿ ಸಭೆಯ ಸಂಪ್ರದಾಯ ಬಲವಾಗಿ ಬೆಂಬಲಿಸುತ್ತದೆ?" ವಿಕ್ಲೆಪ್ ಸತ್ರವೇದ ವಿಶ್ಲೇಷಣ ಗ್ರಂಥ. ಅಂದಿನ ಪೇತ್ರ ಯೇಸುಸ್ವಾಮಿಯನ್ನೇ ಗದರಿಸಿರಬಹುದು..... ಆದರೇನು ಅವರೆಲ್ಲಾ ಸರ್ವನಾಶವಾಗುವುದಿಲ್ಲ. ಅವರೆಲ್ಲರೂ ಆಳುವವರೇ ಆಗಲಿದ್ದಾರೆ.]

ಈ) ನನ್ನ ಸೇಹಿತನೇ ನಿನ್ನ ಬಗ್ಗೆ ಏನು ಹೇಳುತ್ತಿ? ಸತ್ಯವೇದದ ಭಾವನಾತ್ಮಕ ಬೌದ್ಧಿಕತೆಯ ನಿಯಮಗಳನ್ನು ಅನುಸರಿಸುವ ಮುಖಾಮತರ ಅಹಂ ಅನ್ನು ಹೊರ ಒಗೆದು, ಉಪದೇಶವನ್ನು ಅಂಗೀಕರಿಸಿಕೊಳ್ಳುತ್ತೀರಾ? ಅಥವಾ ಆಧ್ಯಾತ್ಮಿಕ ವಿಫಲತೆಯ ನಂತರ ಪೇತ್ರನ ಹಾಗೇ ಮುಂದೆ ಪಾಠ ಕಲಿಯುಲಿಕ್ಕಿದ್ದೀರಾ?

VI. ಮುಂದಿನವಾರ : ದೇವರ ಸೇವೆಯ ನಿಲುಗಂಬ : ಅಪೊಸ್ತಲ ಪೇತ್ರ.